**ಸಾಕ್ಷಿಗೆ ದಿನಾಂಕಃ 27.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀಮತಿ.NP ರವರಿಂದಃ**

1) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, **ಪೋಲಿಸರಿಗೆ ನೀಡಿರುವ ದೂರನ್ನು ನಿ.ಪಿ.2** ಎಂದು ಗುರುತಿಸಿದೆ.

   **ಸೂಚನೆಃ** ನಿ.ಪಿ.**2** ಎಂದು ಗುರುತು ಆಗಿರುವ ದಾಖಲೆಯು ತೆಲುಗು ಭಾಷೆಯಲ್ಲಿದೆ. ಅದರ ಭಾಷಾಂತರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.**2(**ಎ**)** ಎಂದು ಗುರುತಿಸಿದೆ.

2) ಈ ಸಾಕ್ಷಿದಾರರು ಪೊಲೀಸರಿಗೆ ನೀಡಿರುವ ಹೇಳಿಕೆಯ ಪ್ರತಿಯನ್ನು ನಿ.ಪಿ.**3** ಎಂದು ಗುರುತಿಸಿದೆ.

   **ಸೂಚನೆಃ** ನಿ.ಪಿ.**3** ಎಂದು ಗುರುತು ಆಗಿರುವ ದಾಖಲೆಯು ತೆಲುಗು ಭಾಷೆಯಲ್ಲಿದೆ. ಅದರ ಭಾಷಾಂತರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.**3(**ಎ**)** ಎಂದು ಗುರುತಿಸಿದೆ.

3) ಅಪಘಾತ ನಡೆದ ಸ್ಥಳದ ನಕ್ಷೆಗಳನ್ನು ನಿ.ಪಿ.**4** ಮತ್ತು **5** ಎಂದು, ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**6** ಎಂದು, ಅಂತಿಮ ವರದಿಯನ್ನು ನಿ.ಪಿ.**7** ಎಂದು ಗುರುತಿಸಿದೆ.

   **ಸೂಚನೆಃ** ನಿ.ಪಿ.**1** ರಿಂದ **7** ಎಂದು ಗುರುತು ಆಗಿರುವ ದಾಖಲೆಗಳು

ಗಂಗಾವರಂ ಪೊಲೀಸ್ ಠಾಣೆಯವರು ನೀಡಿರುವಂತಹ ಯಥಾ ನಕಲುಗಳು ಆಗಿವೆ.

4) ಬಿಡುಗಡೆ ಚರಿತ್ರೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**8** ಎಂದು ಗುರುತಿಸಿದೆ.

5) ನಿಮ್ಹಾನ್ಸ್ ಆಸ್ಪತ್ರೆಯವರು ನೀಡಿರುವ ದಾಖಲೆಯನ್ನು ನಿ.ಪಿ.**9** ಎಂದು ಗುರುತಿಸಿದೆ

6) ಒಟ್ಟು **3** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**10** ಎಂದು ಗುರುತಿಸಿದೆ.

7) ಈಗ ಸಾಕ್ಷಿದಾರರು ತಮ್ಮ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಯ ಫೋಟೋ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ಫೋಟೋ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟು ಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಯನ್ನು ಸಿದ್ದಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಯನ್ನು ನಿ.ಪಿ.**11** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ

ವಾಪಸ್ಸು ನೀಡಿದೆ.

8) ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.ಎಂ.ಆರ್. ರವರಿಂದಃ**

**1)** ನಾನು **7** ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

**2)** ತೆಲುಗು ಭಾಷೆಯನ್ನು ಓದಲು ಮತ್ತು ಬರೆಯಲು ನನಗೆ ಬರುವುದಿಲ್ಲ. ನಾನು ಹಾಜರುಪಡಿಸಿರುವಂತಹ ದಾಖಲೆಗಳಲ್ಲಿ ಪೊಲೀಸರು ಏನು ಬರೆದಿದ್ದಾರೆ ಎಂದು ಬೇರೆಯವರಿಂದ ಓದಿಸಿ ತಿಳಿದು ಕೊಂಡಿರುವುದಿಲ್ಲ.

**3)** ಅಪಘಾತದ ಸಂಬಂಧವಾಗಿ ಅಪಘಾತ ಆದ ದಿನವೇ ಲಾರಿಯವರು ಪೊಲೀಸರಿಗೆ ದೂರನ್ನು ನೀಡಿದ್ದಾರೆ, ನಾನು ಆಸ್ಪತ್ರೆಯಿಂದ ಬಂದ ನಂತರ ಮತ್ತೊಂದು ದೂರು ನೀಡಿದ್ದೇನೆ.

**4)** ಏಕ ಮುಖ ಸಂಚಾರದ ರಸ್ತೆಯಲ್ಲಿ ನನ್ನ ಗಂಡನು ವಿರುದ್ಧ ದಿಕ್ಕಿನಲ್ಲಿ ತಮ್ಮ ವಾಹನವನ್ನು ಚಾಲನೆ ಮಾಡಿದ್ದಾರೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂಬುದಾಗಿ ಪೊಲೀಸರು ಪ್ರಥಮ ವರ್ತಮಾನ ವರದಿಯಲ್ಲಿ

ನಮೂದು ಮಾಡಿದ್ದಾರೆ ಎಂದರೆ ಆ ರೀತಿ ನಮೂದು ಮಾಡಿರುವುದು ನಿಜ ಆಗಿದೆ, ಆದರೆ ನನ್ನ ಗಂಡನು ಆ ರೀತಿ ಮಾಡಿರುವುದಿಲ್ಲ. ನಾನು ದೂರನ್ನು ಕೊಟ್ಟ ನಂತರ ಅದರ ಆಧಾರದ ಮೇರೆಗೆ ಪೊಲೀಸರು ಮತ್ತೊಂದು ಪ್ರಥಮ ವರ್ತಮಾನ ವರದಿಯನ್ನು ಮಾಡಿರುವುದಿಲ್ಲ.

**5)** ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಪೊಲೀಸರು ಯಾರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯವರು ನೀಡಿರುವ ದಾಖಲೆಗಳ ಪ್ರಕಾರ ನನಗೆ ಕೇವಲ ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ನನ್ನ ತಲೆಗೆ ಸೀಳು ಬರುವಷ್ಟು ಗಾಯ ಆಗಿದೆ. ನಾನು ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ ಎಂದರೆ ಸರಿ.

**6)** ನಾನು ಈಗ ಯಾವುದೇ ಕೆಲಸವನ್ನು ಮಾಡುತ್ತಾ ಇರುವುದಿಲ್ಲ. ನಾನು ಯಾವುದೇ ಕೆಲಸಗಳನ್ನು ಮಾಡಬಾರದು ಎಂದು ಹೇಳಿ ಯಾವುದೇ ಸೂಚನೆಯನ್ನು ಬರವಣಿಗೆಯಲ್ಲಿ ವೈದ್ಯರು ನೀಡಿರುವುದಿಲ್ಲ.

**7)** ನಾನು ಟೈಲರಿಂಗ್ ಕೆಲಸ ಮಾಡುತ್ತಾ ಇದ್ದೆನು ಮತ್ತು ನನಗೆ **20** ಸಾವಿರ ಆದಾಯ ಇತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು

ಮಾಡಿಲ್ಲ ಎಂದರೆ ಸರಿ.

**8)** ನಾನು ಹೇಳಿದ ಹಾಗೆ ನಾನು ಟೈಲರಿಂಗ್ ಕೆಲಸ ಮಾಡುತ್ತಾ ಇರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರಲಿಲ್ಲ ಮತ್ತು ಕೇವಲ ಅಕ್ರಮ ಲಾಭ ಹೊಂದಲು ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**9)** ನಾನು ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ ಮತ್ತು ಆ ಕಾರಣದಿಂದ ಯಾವುದೇ ಡಿಸ್ಚಾರ್ಜ್ ಬಿಲ್ಲು ಕೊಡುವಂತಹ ಪ್ರಶ್ನೆಯೇ ಬರುವುದಿಲ್ಲ ಮತ್ತು ನಾನು ನಿ.ಪಿ.**10** ದಾಖಲೆಯನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**10)** ಅಪಘಾತ ಆಗುವುದಕ್ಕಿಂತ ಮೊದಲು ನಾನು ಎಷ್ಟು ಚೆನ್ನಾಗಿ ಇದ್ದೆನೋ ಅಷ್ಟೇ ಚೆನ್ನಾಗಿ ಇವತ್ತಿಗೂ ಸಹಾ ಇದ್ದೇನೆ ಎಂದರೆ ಸುಳ್ಳು. ಕೇವಲ ಪರಿಹಾರವನ್ನು ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**11)** ಪ್ರಥಮ ವರ್ತಮಾನ ವರದಿಯಲ್ಲಿ ನನ್ನ ಗಂಡನ ತಪ್ಪಿನಿಂದ ಅಪಘಾತವು ಆಗಿದೆ ಎಂದು ಹೇಳಿದ್ದರೂ ಸಹಾ ನಾನು ಮತ್ತು ನನ್ನ ಗಂಡನು ಪೊಲೀಸರ

ಜೊತೆ ಶಾಮೀಲಾಗಿ ಅಂತಿಮ ವರದಿಯಲ್ಲಿ "ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿದೆ" ಎಂಬುದಾಗಿ ಸುಳ್ಳು ಸಂಗತಿಯನ್ನು ಬರೆಸಿದ್ದೇವೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.